**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ.960/2021**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಪರಶುರಾಮಪ್ಪ ಬಸವಂತಪ್ಪ ದೊಣೇರ ಉರ್ಫ ಡೊಳ್ಳೇಶ್ವರ | ಪಿಡಬ್ಲ್ಯೂ | 2 |
| ತಂದೆಃಗಂಡನ ಹೆಸರು | : | ಬಸವಂತಪ್ಪ | ಸಿಡಬ್ಲ್ಯೂ | 2 |
| ವಯಸ್ಸು | : | 48 ವರ್ಷ | | |
| ಉದ್ಯೋಗ | : | ವ್ಯವಸಾಯ | | |
| ವಾಸ ಸ್ಥಳ | : | ಶಿದ್ದಿಹಳ್ಳಿ, ತಾಃ ಸೊರಬ ಜಿಃ ಶಿವಮೊಗ್ಗ | | |

**ದಿನಾಂಕ:28-11-2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ಮೃತ ಮಹದೇವಪ್ಪ ನನಗೆ ಗೊತ್ತು. ಚಾಸಾ-1 ರವರು ಸಹ ಗೊತ್ತು. ಆರೋಪಿ ಗೊತ್ತು. ಈಗ ತೋರುತ್ತಿರುವ ಸ್ಥಳ ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ, ಅದು ನಿಪಿ 2 ಎಂದು ಗುರುತಿಸಲಾಗಿದೆ, ಸದರಿಯವರ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ದಿಃ28-05-2018 ರಂದು ಶಿವಮೊಗ್ಗ ಗೊಂದಿ ರಸ್ತೆಯ ಒಂದು ಕೋಳಿ ಪಾರ್ಮ್ ನ ಹತ್ತಿರ ಜೋಳದ ರಾಶಿ ಹಾಕಿದ ಕಾರಣ ಅಪಘಾತವಾಗಿದ್ದು, ಈ ಬಗ್ಗೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ನನ್ನ, ಚಾಸಾ-1 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10.30 ಯಿಂದ 11.30 ಗಂಟೆಯವರೆಗೆ ಆ ಸ್ಥಳ ಪಂಚನಾಮೆಯನ್ನು ಬರೆದರು. ಆ ಸಂದರ್ಭದಲ್ಲಿ ಪೊಲೀಸರು ಒಂದು ಪೋಟೋವನ್ನು ಸಹ ತೆಗೆದರು, ಆ ಪೊಟೋವನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದೆ. ಈಗ ತೋರುತ್ತಿರುವ ಮೋಟಾರ ಸೈಕಲ ಜಪ್ತು ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ ಅದು ನಿಪಿ 4 ಎಂದು ಈಗಾಗಲೇ ಗುರುತಿಸಲಾಗಿದೆ, ಸದರಿಯವರ ಸಹಿಯನ್ನು ನಿಪಿ 4(ಬಿ) ಎಂದು ಗುರುತಿಸಲಾಯಿತು. ಆ ದಾಖಲೆಗೆ ತಿಳವಳ್ಳಿಯ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಆ ಸಂದರ್ಭದಲ್ಲಿ ಪೊಲೀಸರು ಆರೋಪಿಗೆ ಸೇರಿದ ಬೈಕ ಅನ್ನು ಜಪ್ತು ಮಾಡಿದರು. ಆ ಪಂಚನಾಮೆಯನ್ನು ಮಧ್ಯಾಹ್ನ 1.00 ಗಂಟೆಯಿಂದ 2.00 ಗಂಟೆಯವರೆಗೆ ಬರೆದರು. ಆ ಸಂದರ್ಭದಲ್ಲಿ ಐದು

ಫೋಟೋಗಳನ್ನು ಸಹ ತೆಗೆದರು, ಅವುಗಳನ್ನು ಈಗಾಗಲೇ ನಿಪಿ 5 ರಿಂದ ನಿಪಿ 9 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

ಸ್ಥಳ ಪಂಚನಾಮೆ ಮಾಡುವ ಕಾಲಕ್ಕೆ ಪೊಲೀಸರು ಒಂದು ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿದರು ಎಂದರೆ ಸರಿ. ಮಾಲು ಜಪ್ತು ಪಂಚನಾಮೆಯನ್ನು ತಿಳವಳ್ಳಿಯ ಹೊರ ಪೊಲೀಸ ಠಾಣೆಯ ಹತ್ತಿರ ಬೆಳಿಗ್ಗ 12.00 ರಿಂದ 12.30 ರ ವರೆಗೆ ತಯಾರಿಸಿದರು ಎಂದರೆ ಸರಿ. ಆ ಸಂದರ್ಭದಲ್ಲಿ ಪೊಲೀಸರು ಆರೋಪಿಗೆ ಸೇರಿದ ಬೈಕ್ ನಂಬರ ಕೆಎ 15 ಡಬ್ಲ್ಯೂ9140 ಅನ್ನು ಜಪ್ತು ಮಾಡಿದರು ಎಂದರೆ ಸರಿ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ರೂ.500/- ಖರ್ಚು ಸಹಿತ ಪಾಟೀ ಸವಾಲು ಮಾಡಲು ಕಾಲಾವಕಾಶವನ್ನು ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್